ದಿನಾಂಕ 28-07-2009ನೇ ಮಂಗಳವಾರ ಅಪರಾಹ್ನ 3-00 ಗಂಟೆಗೆ ಸರಿಯಾಗಿ ಉಳ್ಳಾಲ ಪುರಸಭೆಯ ಅಧ್ಯಕ್ಷರಾದ ಶ್ರೀ ಯು.ಎ.ಇಸ್ಮಾಯಿಲ್ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಪುರಸಭೆಯ ಸಾಮಾನ್ಯ ಸಭೆಯ ನಡವಳಿಗಳು.

ಹಾಜರಿ: ಅಧ್ಯಕ್ಷರು ಮತ್ತು ಸದಸ್ಯರು

--------

ವಿಷಯ:72: ಹಿಂದಿನ ಸಾಮಾನ್ಯ ಸಭೆಯ ನಡವಳಿ (30-06-2009) ಮತ್ತು ದಿನಾಂಕ (17-07-2009)ರ ವಿಶೇಷ ಸಾಮಾನ್ಯ ಸಭೆಯ ಹಾಗೂ ಸ್ಥಾಯಿಸಮಿತಿ ಸಭೆಯ ನಡವಳಿ(18-07-2009)ಗಳನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಪರಿಶೀಲಿಸಿ ಮಂಜೂರು ಮಾಡಲಾಯಿತು.

ವಿಷಯ: 73: ಜೂನ್ 2009ರ ತಿಂಗಳ ಜಮಾಖರ್ಚು ಪರಿಶೀಲಿಸಿ ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಪರಿಶೀಲಿಸಿ ಮಂಜೂರು ಮಾಡಲಾಯಿತು

ವಿಷಯ:74: 2007-08ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುವರ್ತನಾ ವರದಿ ಸಲ್ಲಿಸುವ ಕುರಿತು
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅನುವರ್ತನಾ ವರದಿ ಸಲ್ಲಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:75: 2008-09ನೇ ಸಾಲಿಗೆ ಮಂಜೂರಾದ ಎಸ್.ಎಫ್.ಸಿ ಅನುದಾನ ರೂ333.84 ಲಕ್ಷದಲ್ಲಿ ಮಂಜನಾಡಿ ಗ್ರಾಮದ ಲ್ಯಾಂಡ್‌ಫಿಲ್ ಸೈಟ್ ವಿಲೇವಾರಿ ನಿವೇಶನಕ್ಕೆ ಆವರಣಗೋಡೆ ನಿರ್ಮಾಣ ರಸ್ತೆ ಅಭಿವೃದ್ಧಿ ನೀರಿನ ವ್ಯವಸ್ಥೆಯ ಕಾಮಗಾರಿಗೆ ಕಾದಿರಿಸಿದ ರೂ 18.50ಲಕ್ಷಕ್ಕೆ ಬದಲಿ ಕಾಮಗಾರಿ ನಿರ್ವಹಿಸುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರಿಂದ ಮಂಜೂರಾತಿ ಪಡೆಯುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ 2008-09ನೇ ಸಾಲಿನಲ್ಲಿ ಮಂಜೂರಾದ 333.84ಲಕ್ಷದಲ್ಲಿ 217.60ಲಕ್ಷ ಮಾತ್ರ ಬಿಡುಗಡೆಯಾಗಿರುತ್ತದೆ. ಉಳಿದ ಮೊತ್ತ 116.24ಲಕ್ಷ ಕಡಿತಗೊಂಡಿರುತ್ತದೆ. ಈಗಾಗಲೇ ಎಲ್ಲಾ ಮೊತ್ತಕ್ಕೆ ಕ್ರಿಯಾಯೋಜನೆಯನ್ನು ತಯಾರಿಸಲಾಗಿದೆ. ಹಾಗೂ ಮಂಜನಾಡಿಯ ನಿವೇಶನವು ಇನ್ನು ಕೂಡ ಪುರಸಬೆಗೆ ಹಸ್ತಾಂತರವಾಗಿರುವುದಿಲ್ಲ. ಆದುದರಿಂದ ವಿಷಯದಲ್ಲಿರುವ ಕಾಮಗಾರಿಯನ್ನು ಮತ್ತು ಬದಲಿ ಪ್ರಸ್ತಾವನೆಯನ್ನು ಕೈಬಿಡುವುದಾಗಿ ನಿರ್ಣಯಿಸಲಾಯಿತು.

ವಿಷಯ:76:ಉಳ್ಳಾಲ ಪುರಸಭೆ ವ್ಯಾಪ್ತಿಯ ಈ ಕೆಳಗಿನ ಸ್ಥಳಗಳಲ್ಲಿ ಸೆಮಿ ಹೈಮಾಸ್ಟ್ ಕಂಬದ ಸೋಡಿಯಂ ಸೆಟ್ಟುಗಳನ್ನು ಬದಲಾಯಿಸಿ 400 ವ್ಯಾಟ್ಸ್‌ನ ಮೆಟಲ್ ಹೈಲ್ಯಾಡ್(ಎಂ,ಎಚ್) ಅಳವಡಿಸುವ ಕುರಿತು.

1) ದರ್ಗಾ ಪರಿಸರ
2) ಅಬ್ಬಕ್ಕ ಸರ್ಕಲ್
3) ಮಾಸ್ತಿಕಟ್ಟೆ
4) ಓವರ್‌ಬ್ರಿಡ್ಜ್
5) ತೊಕ್ಕೋಟ್ಟು ಮಲ್ಯ ವೃತ್ತ
6) ತೊಕ್ಕೋಟ್ಟು ಒಳಪೇಟೆ
7) ಕೋಡಿ

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸ್ಥಳ ಪರಿಶೀಲಿಸಿ ಅಂದಾಜುಪಟ್ಟಿ ತಯಾರಿಸಿ 2009-2010ನೇ ಸಾಲಿನ ಎಸ್.ಎಫ್.ಸಿ ನಿಧಿಯಿಂದ ಕಾಮಗಾರಿ ನಿರ್ವಹಿಸುವುದಾಗಿ ನಿರ್ಣಯಿಸಲಾಯಿತು.

**ಹೆಚ್ಚುವರಿ ವಿಷಯಗಳು**

ವಿಷಯ:77: ಉಳ್ಳಾಲ ಪುರಸಭೆಗೆ ದಿನಾಂಕ 23-06-2009ರ ಸರ್ಕಾರದ ಆದೇಶ ಸಂಖ್ಯೆ: ನಅಇ 14 ಯುಡಿಎಸ್ 2009ರಂತೆ ರೂ. 6571-00 ಲಕ್ಷಗಳ ಒಳಚರಂಡಿ ಯೋಜನೆ ಮಂಜೂರಾಗಿದ್ದು, ಈ ಬಗ್ಗೆ ಸರ್ವೆ ಕೈಗೊಳ್ಳುವರೇ ರೂ 16-00ಲಕ್ಷಗಳ ಅಂದಾಜುಪಟ್ಟಿ ತಯಾರಿಸಲಾಗಿದ್ದು, ರೂ 2-02ಲಕ್ಷ ಈಗಾಗಲೇ ಪಾವತಿಸಿರುವುದರಿಂದ ಬಾಕಿ ಮೊತ್ತ ರೂ. 13.98ಲಕ್ಷ ಮಂಡಳಿಗೆ ಪಾವತಿಸುವರೇ ದಿನಾಂಕ 4-7-2009ರಂದು ಕನನೀಸ ಮತ್ತು ಒಳಚರಂಡಿ ಮಂಡಳಿಯ ಮಂಗಳೂರು ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಈ ಪುರಸಭೆಗೆ ಬರಕೊಂಡ ಪತ್ರದ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಈ ಪುರಸಭೆಯಲ್ಲಿ ಹಣಕಾಸು ಲಭ್ಯವಿಲ್ಲದಿರುವುದರಿಂದ ಅಂದಾಜುಪಟ್ಟಿಯಲ್ಲಿಯೇ ಸದ್ರಿ ಮೊತ್ತಕ್ಕೆ ಅವಕಾಶ ಇಡುವಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮಂಗಳೂರು ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮರು ಪತ್ರ ಬರೆಯುವುದಾಗಿ ನಿರ್ಣಯಿಸಲಾಯಿತು.

ವಿಷಯ:78: 2008–09ನೇ ಸಾಲಿಗೆ ಪುರಸಭೆಯ ಸಹಾಯವಾಣಿಯ ಗುತ್ತಿಗೆ ಮುಗಿದಿದ್ದು 2009–2010ನೇ ಸಾಲಿನ ಬಗ್ಗೆ ಈಗಾಗಲೇ ಟೆಂಡರು ಕರೆಯಲಾಗಿದ್ದರೂ ಯಾರು ಗುತ್ತಿಗೆದಾರರು ಟೆಂಡರು ಹಾಕದಿರುವುದರಿಂದ 2008–09ನೇ ಸಾಲಿನ ಟೆಂಡರುದಾರರನ್ನು 2009–2010ನೇ ಸಾಲಿಗೆ ಮುಂದುವರಿಸುವರೇ ಅಧ್ಯಕ್ಷರು, ಸ್ವರ್ಣ ನಿರಂತರ ಉಳಿತಾಯ ಗುಂಪುಗಳ ಒಕ್ಕೂಟ(ರಿ) ಉಳ್ಳಾಲರವರು 20–07–2009ರಂದು ಬರಕೊಂಡ ಪತ್ರದ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ 2009–2010ನೇ ಸಾಲಿಗೆ ಸ್ವರ್ಣಜಯಂತಿ ಶಹರಿ ರೋಜ್‌ಗಾರ ಯೋಜನೆಯ ಸ್ವರ್ಣನಿರಂತರ ಉಳಿತಾಯ ಗುಂಪುಗಳ ಒಕ್ಕೂಟ ಉಳ್ಳಾಲ ಇವರಿಗೆ ಮಾಸಿಕ ದರ ರೂ 7500–00ನ್ನು ನಿಗದಿಪಡಿಸಿ ಮುಂದುವರಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:79:ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರಾಕೃತಿಕ ವಿಕೋಪ ಮತ್ತು ಕಡಲ್ಕೊರೆತದಿಂದಾಗಿ ಹಲವಾರು ವಾಸ್ತವ್ಯ ಮನೆಗಳಿಗೆ ಮತ್ತು ಕಟ್ಟಡಗಳಿಗೆ ಹಾನಿ ಉಂಟಾಗಿರುವುದರಿಂದ ಈ ಬಗ್ಗೆ ಪರಿಹಾರ ಕೋರಿ ಬಂದ ಅರ್ಜಿಗಳ ಬಗ್ಗೆ ಕ್ರಮಕೈಗೊಳ್ಳುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಬಂದ ಅರ್ಜಿಗಳನ್ನು ಪರಿಶೀಲಿಸಲಾಗಿ ಸ್ಥಳ ತನಿಖೆ ನಡೆಸಲಾಗಿದ್ದು ಈ ಕೆಳಗಿನಂತೆ ಪರಿಹಾರಧನ ನೀಡುವುದಾಗಿ ನಿರ್ಣಯಿಸಲಾಯಿತು.

| | | |
|---|---|---|
| 1 | ಶಿವಪ್ಪ ಬಿನ್.ಅಂಗಾರ<br>ಅಂಬೋಡಿ ಮನೆ ಪೆರ್ಮನ್ನೂರು | 500–00 |
| 2 | ಅಲ್ ಮಸ್ಜಿದ್ ರಿಫಾಯಲ್,<br>ಕೈಕೋರೋಡು, ಉಳ್ಳಾಲ | 500–00 |
| 3 | ದೂಜ ಡಿಸೋಜ ಬಿನ್. ಹೆನ್ಸಿ ಡಿಸೊಜ ಕಟ್ಟಡನಂಬ್ರ: 4–195/ಎ,<br>ಮುಡಾಯಿಗೆರೆ ಕಾಯಂಗಳ, ಪೆರ್ಮನ್ನೂರು | 500–00 |
| 4 | ಶ್ರೀಮತಿ ನೆಬಿಸಾ<br>ಕೋಂ ಅಬ್ದುಲ್ ಖಾದರ್, ಕಟ್ಟಡನಂಬ್ರ:15–110/26<br>ಹಿಲರಿಯ ನಗರ ಉಳ್ಳಾಲ | 500–00 |
| 5 | ಶ್ರೀಮತಿ ಹಾಜರಮ್ಮ ಕೋಂ.ಬಿ. ಮಹಮ್ಮದ್ | 500–00 |
| 6 | ಅಹಮ್ಮದ್ ಬಾವ ಬಿನ್ ದಿ ಅಬ್ದುಲ್ ಕಾದರ್<br>ಕಟ್ಟಡನಂಬ್ರ: 22–88, ಉಳ್ಳಾಲಬೈಲು ಉಳ್ಳಾಲ | 2000–00 |
| 7 | ಶ್ರೀ ಮಹಮ್ಮದ್ ಹಮ್ಮಬ್ಬ ಬಿನ್. ದಿ, ಹಮ್ಮಬ್ಬ<br>ಕಟ್ಟಡನಂಬ್ರ: 22–50, ಬಂಗೇರ ಕಾಲನಿ ಉಳ್ಳಾಲಬೈಲು | 500–00 |
| 8 | ಬೀಪಾತಿಮ್ಮ ಕೋಂ ಮಹಮ್ಮದ್ ಅಬ್ದುಲ್ ಕಾದರ್,<br>ಕಟ್ಟಡನಂಬ್ರ: 4–147/8, ಕಲ್ಲಾಪು ಪಟ್ಲ, ಪೆರ್ಮನ್ನೂರು | 500–00 |
| 9 | ಶ್ರೀ ಅಬ್ದುಲ್ ಲತೀಫ್<br>ಬಿನ್ ಮೇಸ್ತ್ರಿ ಅಹಮ್ಮದ್,<br>ಕಟ್ಟಡನಂಬ್ರ: 15–84/60 ಕೈಕೋ ಉಳ್ಳಾಲ | 500–00 |
| 10 | ಶ್ರಿಮತಿ ಆಲಿಮಮ್ಮ<br>ಕೋಂ ಯು.ಕೆ. ರಜಾಕ್, ಸುಭಾಸ್ ನಗರ ಉಳ್ಳಾಲ | 500–00 |
| 11 | ಶ್ರೀಮತಿ ವೇದಾವತಿ ಎಸ್ ಕೋಟ್ಯಾನ್<br>ಕಟ್ಟಡನಂಬ್ರ: 4–14/20 ಮೊಗವೀರಪಟ್ನ ಉಳ್ಳಾಲ | 500–00 |
| 12 | ಶಶಿಧರ<br>ಕಟ್ಟಡನಂಬ್ರ 4–63/6 ಮೋಗವೀರ ಪಟ್ನ ಉಳ್ಳಾಲ | 500–00 |
| 13 | ಗಂಗಾಧರ,<br>ಕಟ್ಟಡನಂಬ್ರ 4–14/16 ಮೊಗವೀರಪಟ್ನ ಉಳ್ಳಾಲ | 500–00 |
| 14 | ಇದ್ದಿನಬ್ಬ ಬಿನ್ ಫಕೀರ್,<br>ಕಟ್ಟಡನಂಬ್ರ: 15–110/41 ಸುಭಾಸ್‌ನಗರ ಬೀಚ್ ಉಳ್ಳಾಲ | 500–00 |
| 15 | ಹಮೀದ್ ಬಿನ್ ದಿ. ಹಮ್ಮಬ್ಬ<br>ಕಟ್ಟಡನಂಬ್ರ 15–110/40,<br>ಸುಭಾಸ್ ನಗರ ಬೀಚ್ ರೋಡು ಉಳ್ಳಾಲ | 500–00 |

| | | |
|---|---|---|
| 16 | ಸದಾಶಿವ ಬಿನ್ ನಾರಣಪ್ಪ ಪೂಜಾರಿ,<br>ಕಟ್ಟಡನಂಬ್ರ: 1–212/2, ಮಾರ್ಗತಲೆ ಉಳಿಯ ಪೆರ್ಮನ್ನೂರು | 500–00 |
| 17 | ಶ್ರೀಮತಿ ಆಸ್ಮ ಕಟ್ಟಡನಂಬ್ರ: 15–110/34 ಕಡಪರ<br>ಸುಭಾಸ್ ನಗರ ಉಳ್ಳಾಲ | 500–00 |
| 18 | ಶ್ರೀಮತಿ ಅಮೀನಮ್ಮ ಕಟ್ಟಡನಂಬ್ರ: 15–110/40<br>ಕಡಪರ ಸುಭಾಸ್‌ನಗರ ಉಳ್ಳಾಲ | 500–00 |
| 19 | ಶ್ರೀಮತಿ ರಮ್ಲತ್ ಕಟ್ಟಡನಂಬ್ರ: 15–110/29<br>ಕಡಪರ ಸುಭಾಸ್‌ನಗರ ಉಳ್ಳಾಲ | 500–00 |
| 20 | ಅಬ್ದುಲ್ ಅಜೀಜ್ ಕಟ್ಟಡನಂಬ್ರ: 15–110/29ಏ<br>ಕಡಪರ ಸುಭಾಸ್‌ನಗರ ಉಳ್ಳಾಲ | 500–00 |
| 21 | ಶ್ರೀಮತಿ ಮರಿಯಮ್ಮ ಕಟ್ಟಡನಂಬ್ರ: 15–110/36<br>ಕಡಪರ ಸುಭಾಸ್‌ನಗರ ಉಳ್ಳಾಲ | 500–00 |
| 22 | ಶ್ರೀಮತಿ ಹಾಜರಮ್ಮ ಕೋಂ ಅಬ್ದುಲ್ ಹಮೀದ್<br>ಕಟ್ಟಡನಂಬ್ರ: 15–84/50 ಕೈಕೋರೋಡು ಇಂದಿರಾನಗರ ಉಳ್ಳಾಲ | 500–00 |
| 23 | ಶ್ರೀಮತಿ ಸೆಫಿಯಾ ಕಟ್ಟಡನಂಬ್ರ: 15–110/3<br>ಕಡಪರ ಸುಭಾಸ್‌ನಗರ ಉಳ್ಳಾಲ | 500–00 |
| 24 | ಮಹಮ್ಮದ್ ಶಾಫಿ ಕಟ್ಟಡನಂಬ್ರ: 15–110/3<br>ಕಡಪರ ಸುಭಾಸ್‌ನಗರ ಉಳ್ಳಾಲ | 500–00 |
| 25 | ಶ್ರೀಮತಿ ಬೀಪಾತುಮ್ಮ ಕಟ್ಟಡನಂಬ್ರ: 15–84/47<br>ಕೈಕೋರೋಡು ಇಂದಿರಾನಗರ ಉಳ್ಳಾಲ | 500–00 |
| 26 | ಶ್ರೀಮತಿ ಅತ್ತಿಮೋಳು ಕಟ್ಟಡನಂಬ್ರ: 15–84/16<br>ಕೈಕೋರೋಡು ಸುಬಾಸ್‌ನಗರ ಉಳ್ಳಾಲ ಉಳ್ಳಾಲ | 500–00 |
| 27 | ಶ್ರೀಮತಿ ನೆಬಿಸಾ ಕಟ್ಟಡನಂಬ್ರ: 15–84/49<br>ಕೈಕೋರೋಡು ಇಂದಿರಾನಗರ ಉಳ್ಳಾಲ | 500–00 |
| 28 | ಇಸ್ಮಾಯಿಲ್ ಕಟ್ಟಡನಂಬ್ರ: 15–84/53<br>ಕೈಕೋರೋಡು ಇಂದಿರಾನಗರ ಉಳ್ಳಾಲ | 500–00 |
| 29 | ಶ್ರೀಮತಿ ಮರಿಯಮ್ಮ ಕಟ್ಟಡನಂಬ್ರ: 15–84/36<br>ಕಡಪರ ಕೈಕೋರೋಡು ಉಳ್ಳಾಲ | 500–00 |
| 30 | ಶ್ರೀಮತಿ ಪಾತುಂಞ ಕಟ್ಟಡನಂಬ್ರ: 15–84/43<br>ಕೈಕೋರೋಡು ಇಂದಿರಾನಗರ ಉಳ್ಳಾಲ | 500–00 |
| 31 | ಶ್ರೀಮತಿ ಅಮೀನಮ್ಮ ಕಟ್ಟಡನಂಬ್ರ: 15–110/31<br>ಕೈಕೋರೋಡು ಇಂದಿರಾನಗರ ಉಳ್ಳಾಲ | 500–00 |
| 32 | ಶ್ರೀಮತಿ ಜುಬೈದಾ ಕಟ್ಟಡನಂಬ್ರ: 15–110/44<br>ಕಡಪರ ಸುಭಾಸ್‌ನಗರ ಉಳ್ಳಾಲ | 500–00 |
| 33 | ಶ್ರೀಮತಿ ಜಮೀಲ ಕಟ್ಟಡನಂಬ್ರ: 15–110/25<br>ಕಡಪರ ಸುಭಾಸ್‌ನಗರ ಉಳ್ಳಾಲ | 500–00 |
| 34 | ಶ್ರೀಮತಿ ಐಸಮ್ಮ ಕಟ್ಟಡನಂಬ್ರ: 15–110/47<br>ಕಡಪರ ಸುಭಾಸ್‌ನಗರ ಉಳ್ಳಾಲ | 500–00 |
| 35 | ಶ್ರೀಮತಿ ಬೀಪಾತಿಮ್ಮ ಕಟ್ಟಡನಂಬ್ರ: 15–110/41<br>ಕಡಪರ ಸುಭಾಸ್‌ನಗರ ಉಳ್ಳಾಲ | 500–00 |

| | | |
|---|---|---|
| 36 | ಶ್ರೀಮತಿ ಮರಿಯಮ್ಮ ಕಟ್ಟಡನಂಬ್ರ: 15–84/52<br>ಕೈಕೋರೋಡು ಇಂದಿರಾನಗರ,ಉಳ್ಳಾಲ | 500–00 |
| 37 | ಶ್ರೀಮತಿ ಸಿಸಿಲಿಯಾ ಪೆರಾವ್ರೋ ಕೋಂ ದಿ ಮಾರ್ಸೆಲ್ ಡಿಸೋಜ,<br>ಮುಕ್ಕಚೇರಿ ಕೋಟೆ ಉಳ್ಳಾಲ | 500–00 |
| 38 | ಶ್ರೀ ಲತೀಪ್ ಕಟ್ಟಡನಂಬ್ರ: 15–84/60 ಕೈಕೋರೋಡು ಇಂದಿರಾನಗರ,ಉಳ್ಳಾಲ | 500–00 |
| 39 | ಶ್ರೀ ಮೊಹಮ್ಮದ್ ಬಿನ್. ದಿ. ಹಮ್ಮಬ್ಬ ಕಟ್ಟಡನಂಬ್ರ: 22–50 ಕಲಂದರ್ ಮಂಜಿಲ್ ಉಳ್ಳಾಲಬೈಲು | 500–00 |
| 40 | ಶ್ರೀಮತಿ ಆಲಿಮಮ್ಮ ಕಟ್ಟಡನಂಬ್ರ: 15–110/35 ಕಡಪರ ಸುಭಾಸ್‌ನಗರ ಉಳ್ಳಾಲ | 500–00 |
| 41 | ಶ್ರೀಮತಿ ಅವ್ವಮ್ಮ ಕೋಂ. ಯು.ಕೆ.ಅಬ್ಬಾಸ್, ಕಟ್ಟಡನಂಬ್ರ: 1–64/2, ಬರಕಾ ರೋಡು ಕೋಟೆಪುರ ಉಳ್ಳಾಲ | 500–00 |
| 42 | ಶ್ರೀಮತಿ ಮೈಮುನಾ ಕೋಂ ಅಹಮ್ಮದ್ ಬಾವ<br>ಕಟ್ಟಡನಂಬ್ರ: 9–53/4 ಮಿಲ್ಲತ್‌ನಗರ ಉಳ್ಳಾಲ | 500–00 |
| 43 | ಶ್ರೀಮತಿ ಪುಷ್ಪಾ ಕೋಂ ರಾಮಚಂದ್ರ, ಕಟ್ಟಡನಂಬ್ರ: 18–65/135 ಧರ್ಮನಗರ, ರಿಚ್ಚಿಯ ಮನೆ ವಠಾರ ಉಳ್ಳಾಲ | 500–00 |
| 44 | ಶ್ರೀ ರಮೇಶ್ ಕಟ್ಟಡನಂಬ್ರ: 20–5/9 – 18–65/125(ಭಾಗ –2) ಧರ್ಮನಗರ, ಉಳ್ಳಾಲ | 500–00 |
| 45 | ಶ್ರೀಮತಿ ವಿನೋದ,<br>18–65/15 ಧರ್ಮನಗರ, ಉಳ್ಳಾಲ | 1000–00 |
| 46 | ನಾರಾಯಣ್ ಸುಂದರಿಬಾಗ್,<br>ಕಟ್ಟಡನಂಬ್ರ: 18–65/13, ಸುಂದರಿಬಾಗ್ ಉಳ್ಳಾಲ | 1000–00 |

ವಿಷಯ:80: ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ವಧಾಗೃಹ ಇಲ್ಲದೆ ಬಹಳ ತೊಂದರೆಯಾಗಿದ್ದು ಮಂಗಳೂರಿನ ವಧಾಗೃಹದಿಂದ ಇಲ್ಲಿಯ ಲೈಸನ್ಸುದಾರರು ಮಾಂಸವನ್ನು ಸರಬರಾಜು ಮಾಡಬೇಕಾಗಿರುವುದರಿಂದ ಗ್ರಾಹಕರಿಗೂ ತೊಂದರೆಯಾಗುತ್ತಿದ್ದು ಈ ಬಗ್ಗೆ ಆಧುನಿಕ ರೀತಿಯಲ್ಲಿ ತಾಂತ್ರಿಕತೆ ಹೊಂದಿದ ನೂತನ ವಧಾಗೃಹವನ್ನು ನಿರ್ಮಿಸಿಕೊಡಬೇಕಾಗಿ ಉಳ್ಳಾಲ ಪರಿಸರದ ಗ್ರಾಹಕರು ಮತ್ತು ಲೈಸನ್ಸುದಾರರು ದಿನಾಂಕ 17–07–2009ರಂದು ಬರಕೊಂಡ ಸಾಮೂಹಿಕ ಅರ್ಜಿಯ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಸುಸಜ್ಜಿತವಾದ ವೈಜ್ಞಾನಿಕವಾದ ವಧಾಗೃಹವನ್ನು ಸಂಬಂಧಪಟ್ಟ ಇಲಾಖೆಯ ಅನುಮೋದನೆ ಪಡೆದು ಸರಕಾರದ ವತಿಯಿಂದ ಉಳ್ಳಾಲ ಗ್ರಾಮದ ಸರ್ವೆನಂಬ್ರ: 31/1ಸಿಪಿ2, 31–5ಜಿ, 31–5ಎಚ್, ಮತ್ತು 31–ಸಿಪಿ1 ಮತ್ತು 201ರಲ್ಲಿ ರಚಿಸುವುದೆಂದು ಮತ್ತು ಈ ಸಂಬಂಧ ಜಿಲ್ಲಾಡಳಿತ/ಸಂಬಂದಪಟ್ಟ ಇಲಾಖೆ ಮತ್ತು ಸರಕಾರ ಕೂಡಲೇ ಕಾರ್ಯನ್ಮುಖರಾಗುವಂತೆ ಒತ್ತಾಯಿಸಿವುದೆಂದು ನಿರ್ಣಯಿಸಲಾಯಿತು.

ವಿಷಯ:81: ಉಳ್ಳಾಲ ಪುರಸಭೆಯ ಕಚೇರಿಯ ಆಸ್ತಿ ತೆರಿಗೆಯು ಅನ್‌ಲೈನ್ ಆಗಿದ್ದು ಮತ್ತು ಅಕೌಂಟ್ಸ್ ಶಾಖೆಯಲ್ಲಿ ಕಂಪ್ಯೂಟರ್ ಮಾತ್ರ ಇದ್ದು ಪ್ರಿಂಟರ್ ಇಲ್ಲದಿರುವುದರಿಂದ ಪ್ರಿಂಟರ್ ತೆಗೆಯುವರೇ ತೊಂದರೆಯಾಗಿದ್ದು ಅಲ್ಲದೆ ಜನನ ಮರಣ ಶಾಖೆಯಲ್ಲಿಯೂ ಕಂಪ್ಯೂಟರ್ ಮಾತ್ರ ಇದ್ದು ಪ್ರಿಂಟರ್ ಇಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದರಿಂದ 2 ಗಣಕಯಂತ್ರಗಳು ಮತ್ತು 3 ಪ್ರಿಂಟರ್‌ಗಳನ್ನು ಒದಗಿಸಬೇಕಾಗಿ ಸಂಬಂಧಪಟ್ಟ ವಿಭಾಗಗಳ ಸಿಬ್ಬಂದಿಗಳು ಬರಕೊಂಡ ಪತ್ರದ ಕುರಿತು
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ 2 ಗಣಕಯಂತ್ರ ಮತ್ತು 3 ಪ್ರಿಂಟರ್‌ಗಳನ್ನು ಖರೀದಿಸುವುದಾಗಿ ನಿರ್ಣಯಿಸಲಾಯಿತು.

**ಅಧ್ಯಕ್ಷರ ಅನುಮತಿ ಮೇರೆಗೆ ಬಂದ ವಿಷಯಗಳು;**

ವಿಷಯ: 82: ಉಳ್ಳಾಲ ಪುರಸಭಾ ವ್ಯಾಪ್ತಿಯ 22ನೇ ವಾರ್ಡಿನ ಕಲ್ಲಾಪು ಮುನಾವರ್ ಮಸೀದಿ ಬಳಿಯಿಂದ ಬಾಬು ಹೋಟೇಲುತನಕ ಜೆ.ಸಿ.ಬಿಯಿಂದ ಚರಂಡಿ ರಚಿಸುವಾಗ 3ಇಂಚಿನ ನೀರು ಸರಬರಾಜು ಕೊಳವೆ ಸುಮಾರು 90ಮೀನಷ್ಟು ಕೊಳವೆ ಒಡೆದಿದ್ದು, ಇದರಿಂದಾಗಿ ನೀರು ಸರಬರಾಜಿಗೆ ಆಡಚಣೆಯಾಗಿರುತ್ತದೆ. ಸದ್ರಿ ಕೊಳವೆಯನ್ನು ದುರಸ್ತಿಪಡಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀ ಯು.ಎಚ್. ಫಾರೂಕ್ ಇವರ ಮನವಿ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:83: ಉಳ್ಳಾಲ ಪುರಸಭಾ ವ್ಯಾಪ್ತಿಯ 23ನೇ ವಾರ್ಡಿನ ಕಲ್ಲಾಪು ರಜಾಕ್ ಮನೆ ಬಳಿ ಜೆಸಿಬಿಯಿಂದ ಚರಂಡಿ ರಚಿಸುವಾಗ 3 ಇಂಚಿನ 18ಮೀ ಕೊಳವೆ ಒಡೆದಿದ್ದು ಇದರಿಂದಾಗಿ ನೀರು

ಸರಬರಾಜಿಗೆ ಆಡಚಣೆಯಾಗಿರುತ್ತದೆ. ಸದ್ರಿ ಕೊಳವೆಯನ್ನು ದುರಸ್ತಿಪಡಿಸುವ ಕುರಿತು ಸ್ಥಳೀಯ ಸದಸ್ಯರಾದ ಶ್ರೀಮತಿ ಸುವಾಸಿನಿ ಜೆ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:84: ಉಳ್ಳಾಲ ಪುರಸಭಾ ವ್ಯಾಪ್ತಿಯ 25ನೇ ವಾರ್ಡಿನ ಹೊಸಗದ್ದೆತನಕ ಜೆ.ಸಿ.ಬಿಯಿಂದ ಚರಂಡಿ ರಚಿಸುವಾಗ 2ಇಂಚಿನ ಕೊಳವೆ ಅಲ್ಲಲ್ಲಿ ಒಡೆದು ನೀರು ಸರಬರಾಜು ಮಾಡಲು ಅಡಚಣೆಯಾಗಿರುತ್ತದೆ ಸದ್ರಿ ಕೊಳವೆಯನ್ನು ದುರಸ್ತಿಪಡಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಮತಿ ರತ್ನಾವತಿ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:85: ಉಳ್ಳಾಲ ಪುರಸಭೆಯ ಕಿರಿಯ ಅಭಿಯಂತರರಾದ ಶ್ರೀ ಶ್ರೀಧರ ನಾಯ್ಕ್ ಇವರ ತಂದೆಯಾದ ಶ್ರೀ ಅಣ್ಣುನಾಯ್ಕ್‌ರವರ ವೈದ್ಯಕೀಯ ಶುಶ್ರೂಷೆಗೆ ತಗಲಿದ ಬಿಲ್ಲು ಪಾವತಿಸಲು ಕೋರಿರುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಶ್ರೀ ಶ್ರೀಧರ ನಾಯ್ಕ್, ಕಿರಿಯ ಅಭಿಯಂತರರು ,ಪುರಸಭೆ ಉಳ್ಳಾಲ ಇವರ ತಂದೆಯಾದ ಶ್ರೀ ಅಣ್ಣುನಾಯ್ಕ್‌ರವರ ವೈದ್ಯಕೀಯ ವೆಚ್ಚ ಮರುಪಾವತಿಗೆ ಸಲ್ಲಿಸಿರುವ ಬಿಲ್ಲುಗಳನ್ನು ಮೇಲು ಸಹಿಗೆ ಮಾನ್ಯ ಜಿಲ್ಲಾಧಿಕಾರಿಯವರ ಕಚೇರಿಗೆ ಸಲ್ಲಿಸಲು ನಿರ್ಣಯಿಸಲಾಯಿತು.

ವಿಷಯ:86: ಉಳ್ಳಾಲಪುರಸಭೆಯ ನೌಕರರಾದ ಬಸ್ತಿಪಡ್ಪುನಲ್ಲಿರುವ ವಸತಿಗೃಹದ ಶ್ರೀ ಚಂದ್ರಹಾಸ ಇವರು ವಾಸ್ತವ್ಯ ಮಾಡುತ್ತಿರುವ ವಸತಿ ಗೃಹವನ್ನು ದುರಸ್ತಿಪಡಿಸುವಂತೆ ಸದ್ರಿ ನೌಕರರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:87: ಉಳ್ಳಾಲ ಪುರಸಭಾ ವ್ಯಾಪ್ತಿಯ ತೊಕ್ಕೊಟ್ಟು ಬಸ್ಸು ನಿಲ್ದಾಣದ ವಾಣಿಜ್ಯ ಸಂಕೀರ್ಣದ 1ನೇ ಮಹಡಿಗೆ ಹೋಗುವ ಪಶ್ಚಿಮಭಾಗದ ಮೆಟ್ಟಲಿನ ಅಡಿಯಲ್ಲಿ ಅಂಗವಿಕಲನಾಗಿರುವ ಶ್ರೀ ಸಬೆಸ್ಟಿಯನ್ ಲೋಪೆರ್ಝ್ ಇವರಿಗೆ ಜೆರಾಕ್ಸ್ ಮತ್ತು ಸ್ಟೇಶನರಿ ಮಾರಾಟ ಮಾಡುವರೇ ಬಾಡಿಗೆ ನೆಲೆಯಲ್ಲಿ ನೀಡಬೇಕಾಗಿ ಸದ್ರಿಯವರ ಅರ್ಜಿಯ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸರಕಾರದ ದರ ನಿಗದಿಪಡಿಸಿ ಸ್ಥಳ ಬಾಡಿಗೆ ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ:88: ಉಳ್ಳಾಲ ಪುರಸಭಾ ವ್ಯಾಪ್ತಿಯ ತೊಕ್ಕೊಟ್ಟು ಬಸ್ಸು ನಿಲ್ದಾಣದ ವಾಣಿಜ್ಯ ಸಂಕೀರ್ಣದ ಪೂರ್ವಭಾಗದ ಮೆಟ್ಟಲಿನ ಅಡಿಯಲ್ಲಿ ಹಾಲು ಮತ್ತು ಪೇಪರ್ ಮಾರಾಟಕ್ಕೆ ಅವಕಾಶ ನೀಡಬೇಕಾಗಿ ಸ್ಟ್ಯಾನಿಡಿಸೋಜ ಬಿನ್ ಜೆರಿ ಡಿಸೋಜ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸದ್ರಿ ಅರ್ಜಿದಾರರು ಪೋಲಿಯೋ ಪೀಡಿತರಾಗಿರುವುದರಿಂದ ಸರಕಾರದ ದರ ನಿಗದಿಪಡಿಸಿ ಸ್ಥಳ ಬಾಡಿಗೆ ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ:89: ಉಳ್ಳಾಲ ವ್ಯಾಪ್ತಿಯ ತೊಕ್ಕೊಟ್ಟು ರಾಷ್ಟ್ರೀಯ ಹೆದ್ದಾರಿ ಬಳಿ ಸಾರ್ವಜನಿಕ ಕೆರೆಯ ಸ್ಥಳವನ್ನು ಪೆಟ್ರೋಲ್ ಬಂಕಿಗೆ ಮೀಸಲಾಗಿಸಿದ್ದನ್ನು ಬದಲಾಯಿಸಿ ಖಾಸಗಿ ವ್ಯಕ್ತಿಗೆ ವಾಣಿಜ್ಯ ಕಟ್ಟಡ ನಿರ್ಮಿಸಲು ಪರವಾನಿಗೆಯನ್ನು ಸರಕಾರದ ಇಲಾಖೆಯ ಕ್ರಮದ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಇಲಾಖೆಯ ಕ್ರಮವನ್ನು ಖಂಡಿಸಿ ಆ ಸ್ಥಳವನ್ನು ಪುರಸಭೆಗೆ ಕಂದಾಯ ಇಲಾಖೆಗೆ ಮರುವರ್ಗಾಯಿಸುವಂತೆ ಸರಕಾರಕ್ಕೆ ತಿಳಿಸಿ ಕ್ರಮಕೈಗೊಳ್ಳದಿದ್ದಲ್ಲಿ ಕಾನೂನು ಮೂಲಕ ಹೋರಾಟ ಮಾಡಿ ತಪಿತಸ್ಥ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳುವುದಾಗಿಯೂ ಅಲ್ಲದೆ ಆ ಸ್ಥಳದಲ್ಲಿ ವಾಣಿಜ್ಯ ಕಟ್ಟಡಕ್ಕೆ ಪುರಸಭೆಯಿಂದ ಪರವಾನಿಗೆ ನೀಡದಿರಲು ನಿರ್ಣಯಿಸಲಾಯಿತು.

ವಿಷಯ:90: ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಸರಕಾರಿ ಜಾಗಗಳ ವಿವರ ಪಡೆದು ಕಂದಾಯ ಇಲಾಖೆ ಯಾ ಪುರಸಭೆಗೆ ಸೇರಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ವಿವರ ಪಡೆದು ಸೇರಿಸಿಕೊಳ್ಳುವುದಾಗಿ ನಿರ್ಣಯಿಸಲಾಯಿತು

ವಿಷಯ:91: ಉಳ್ಳಾಲ ಪುರಸಭಾ ವ್ಯಾಪ್ತಿಯ 9ನೇ ವಾರ್ಡು ಜಾರಬಳಿ ಪ್ರದೇಶದ ಮುಖ್ಯರಸ್ತೆ ಬಳಿ ಇಂಟರ್ ಲಾಕ್ ಅಳವಡಿಸುವರೇ ಸ್ಥಳೀಯ ಸದಸ್ಯರಾದ ಶ್ರೀ ಅಬ್ದುಲ್ ಪತ್ತಾಕ್ ಇವರ ಮನವಿ ಕುರಿತು
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:92: ಉಳ್ಳಾಲ ಹರ್ಬ್ರುತ್ ಸಯ್ಯದ್ ಮದನಿ ದರ್ಗಾದ ಮುಖ್ಯರಸ್ತೆಯಲ್ಲಿರುವ ರಸ್ತೆ ವಿಭಾಜಕವನ್ನು ಈಗಾಗಲೇ ತೆಗೆಸಿದ್ದು ಸದ್ರಿ ಸ್ಥಳಕ್ಕೆ ಇಂಟರ್‌ಲಾಕ್ ಅಳವಡಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:93: ಉಳ್ಳಾಲ ಪುರಸಭಾ ಕಚೇರಿಯ ಕಂದಾಯ ವಿಭಾಗಕ್ಕೆ ಸ್ವಯಂಘೋಷಿತ ಆಸ್ತಿ ತೆರಿಗೆಯ ಫಾರ್ಮು (ಬಿಳಿಕಾಗದ) ಮುಗಿದಿರುವುದರಿಂದ 5000 ಪ್ರತಿಗಳನ್ನು ಸ್ಥಳೀಯ ಮುದ್ರಾಣಲಯದಿಂದ ಕೋಟೇಶನು ಕರೆದು ಮುದ್ರಿಸಿ ತರಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕೋಟೇಶನು ಕರೆದು ಮುದ್ರಿಸಿ ತರಿಸುವುದಾಗಿ ನಿರ್ಣಯಿಸಲಾಯಿತು

ವಿಷಯ:94: ಉಳ್ಳಾಲ ಪುರಸಭಾ ವ್ಯಾಪ್ತಿಯ ಮಾಸ್ತಿಕಟ್ಟೆಯ ಕುಮರೆ ಶ್ರೀ ಪೂಮಾಲೆ ಭಗವತಿ ದೇವಸ್ಥಾನಕ್ಕೆ ಹೋಗುವ ದಾರಿಗೆ ಹೈಮಾಸ್ಟ್ ಲೈಟು ಅಳವಡಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಳವಡಿಸುವುದಾಗಿ ನಿರ್ಣಯಿಸಲಾಯಿತು

ವಿಷಯ:95: ಉಳ್ಳಾಲ ಪುರಸಭೆ ವ್ಯಾಪ್ತಿಯ ದಾರಿದೀಪ ನಿರ್ವಹಣೆ, ಘನತ್ಯಾಜ್ಯ ನಿರ್ವಹಣೆ, ನೀರು ಸರಬರಾಜು ಇತ್ಯಾದಿಗಳನ್ನು ಚುನಾವಣಾ ನೀತಿ ಸಂಹಿತೆ ಇದ್ದುದರಿಂದ 2009-2010ನೇ ಸಾಲಿಗೆ 3ತಿಂಗಳ ಕಾಲ ಹಿಂದಿನ ಟೆಂಡರುದಾರರಿಗೆ ಮುಂದುವರಿಸಲು ಆದೇಶ ನೀಡಿದ್ದಕ್ಕೆ ಘಟನೋತ್ತರ ಮಂಜೂರಾತಿ ನೀಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಘಟನೋತ್ತರ ಮಂಜೂರಾತಿ ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ:96: ಉಳ್ಳಾಲ ಪುರಸಭಾ ವ್ಯಾಪ್ತಿಯ ಸೋಮನಾಥ ಬಡಾವಣೆಗೆ ಪರಿಹಾರ ನಿಧಿಯಲ್ಲಿ ಬಾವಿ ಕುಸಿತಕ್ಕೆ 5ಲಕ್ಷವನ್ನು ಮಂಜೂರು ಮಾಡಿದ್ದು ಉಳಿಕೆ ಹಣದ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಹೆಚ್ಚುವರಿ ಖರ್ಚಿನ ಉಳಿಕೆ ಹಣ ರೂ 3.40ಲಕ್ಷವನ್ನು 2009-2010ರ ಎಸ್.ಎಫ್.ಸಿ ನಿಧಿಯಿಂದ ಭರಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:97: ಕಚೇರಿಯ ಜೆರಾಕ್ಸ್ ಮಿಷನ್ ದುರಸ್ತಿಯ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕೋಟೆಶನು ಕರೆದು ದುರಸ್ತಿಪಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:98: ಎಸ್.ಎಫ್.ಸಿ ನಿಧಿಯ ಶೇ18ರ ನಿಧಿಯಡಿ ಗಂಬೀರ ಕಾಯಿಲೆಗೆ ತುತ್ತಾದವರಿಗೆ ಸಹಾಯಧನ ನೀಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಈ ಕೆಳಗಿನವರಿಗೆ ಸಹಾಯಧನ ತಲಾ ರೂ 5000/-ದಂತೆ ನೀಡುವುದಾಗಿ ನಿರ್ಣಯಿಸಲಾಯಿತು

1. ಲಿಂಗು C/O ಕಾಶಿ ಮನೆನಂಬ್ರ: 3-65/11ಎ
2. ಭಾಗಿ C/O ಸುಂದರ ಅಂಬೇಡ್ಕರ್ ನಗರ ಪೆರ್ಮನ್ನೂರು
3. ವಂದನ ಬಿನ್. ಶೋಭ ಚೆಂಬುಗುಡ್ಡೆ ಅಂಬೇಡ್ಕರ್ ನಗರ

ಸಹಿ. ಅಧ್ಯಕ್ಷರು ಮತ್ತು ಸದಸ್ಯರು

(ಯಥಾಪ್ರತಿ)

ಮುಖ್ಯಾಧಿಕಾರಿ
ಉಳ್ಳಾಲ ಪುರಸಭೆ,ದ.ಕ